7 ಜನ ಕಾರ್ಮಿಕರನ್ನು ಕೆಲಸದಿಂದ ತೆಗೆದ ಬಗ್ಗೆ ಸರ್ಕಾರಿ ಆದೇಶ ಸಂ:ಕಾಇ 280 ಐಡಿಎಂ 2006 ದಿನಾಂಕ: 29–3–2006 ರಡಿಯಲ್ಲಿ ನ್ಯಾಯ ನಿರ್ಣಯಕ್ಕಾಗಿ ಕಾರ್ಮಿಕ ನ್ಯಾಯಾಲಯ, ಮೈಸೂರು ಇಲ್ಲಿಗೆ ಒಪ್ಪಿಸಲಾಗಿದೆ.

ಒಬ್ಬ ಕಾರ್ಮಿಕಳನ್ನು ಕೆಲಸದಿಂದ ತೆಗೆದ ಬಗ್ಗೆ ಸರ್ಕಾರಿ ಆದೇಶ ಸಂ:ಕಾಇ 444 ಐಡಿಎಂ 2006 ದಿನಾಂಕ: 22–5–2006ರಡಿಯಲ್ಲಿ ನ್ಯಾಯ ನಿರ್ಣಯಕ್ಕಾಗಿ ಕಾರ್ಮಿಕ ನ್ಯಾಯಾಲಯ, ಮೈಸೂರು ಇಲ್ಲಿಗೆ ಒಪ್ಪಿಸಲಾಗಿದೆ.

ಕಾರ್ಮಿಕ ಸಂಘದ 30 ಅಂಶಗಳ ಬೇಡಿಕೆಯ ಬಗ್ಗೆ ಸಂಧಾನ ನಡವಳಿಗಳು ವಿಫಲವಾದ್ದರಿಂದ ವಿವಾದವನ್ನು ನ್ಯಾಯ ನಿರ್ಣಯಕ್ಕೆ ಒಪ್ಪಿಸಲು ಕ್ರಮ ಜರುಗಿಸಲಾಗುತ್ತಿದೆ.

2. ಜೆನಿತ್ ಟೆಕ್ಸ್‌ಟೈಲ್ಸ್, ನಂಜನಗೂಡು : ಕಾರ್ಮಿಕ ಸಂಘದ 22 ಅಂಶಗಳ ಬೇಡಿಕೆಗಳ ಬಗ್ಗೆ ಸಂಧಾನ ನಡವಳಿಗಳು ವಿಫಲವಾದ್ದರಿಂದ ವಿವಾದವನ್ನು ನ್ಯಾಯ ನಿರ್ಣಯಕ್ಕೆ ಒಪ್ಪಿಸಲು ಕ್ರಮ ಜರುಗಿಸಲಾಗುತ್ತಿದೆ.

3) ಸಾಯಿಲಕ್ಷ್ಮಿ ಇಂಡಸ್ಟ್ರೀಸ್ ಪ್ರೈ.ಲಿ., ತಾಂಡ್ಯ ಕೈಗಾರಿಕಾ ಪ್ರದೇಶ, ನಂಜನಗೂಡು: ಈ ಕಾರ್ಖಾನೆಯನ್ನು ಕೈಗಾರಿಕಾ ವಿವಾದ ಕಾಯ್ದೆ 1947ರ ಪ್ರಕರಣ 25 ಎಫ್ ಎಫ್ ಅಡಿಯಲ್ಲಿ ನೂತನ ಮಾಲೀಕರಿಗೆ ವರ್ಗಾಯಿಸಿರುವ ಬಗ್ಗೆ ಕಾರ್ಮಿಕರು ವಿವಾದವನ್ನು ಎತ್ತಿದ್ದು, ಸದರಿಯವರನ್ನು ಹೊಸ ಆಡಳಿತ ವರ್ಗದವರು ಸೇವೆಯಲ್ಲಿ ಮುಂದುವರೆಸಬೇಕೆಂಬ ಬೇಡಿಕೆ ಬಗ್ಗೆ ಸಂಧಾನ ನಡವಳಿಗಳ ಮೂಲಕ ಇತ್ಯರ್ಥಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

1716 ಶ್ರೀ ಶ್ರೀರಾಮರೆಡ್ಡಿ ಜಿ.ವಿ. : ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

A) Whether instances of increasing oppression against the workmen in the Nanjangud area have come to the notice of the Government?

B) M/s. Flair Garments have illegally terminated 47 workmen and that the suggestion of the Honble Labour Minister to take back these workmen has not been implemented and that whether this fact has come to the notice of the Government?

C) If so, the steps taken by the Government to tackle the oppressions against the workmen of Nanjangud area?

Sri Iqbal Ansari (Minister for Labour and Minorities Welfare) :

A) The industrial Disputes between the management and the workmen have come to the notice of the Government. However, no instances of any oppression against the workmen of Nanjangud area have been reported.

B) Yes

C) The Government has taken following steps with regard to the disputes pertaining to 1) Flair Garments Pvt. Ltd., Tandya Industrial Area, Nanjangud 2) Zenith Textiles, Nanjangud 3) Sai Laxmi Industries Pvt. Ltd., Tandya Industrial Area, Nanjangud

1) Flair Garments Pvt Ltd., Tandya Industrial Area, Nanjungud:

The dispute of termination of 22 workmen has been referred by the Government by adjudication to the Labour Court, Mysore vide Order No.LD 65 IDM 2006 dated 27-2-2006.

The dispute of termination of 7 workmen has been referred by the Government for adjudication to the Labour Court, Mysore vide Order No.LD 280 IDM 2006 dated 29-3-2006.

The dispute of termination one workman has been referred by the Government for adjudication to the Labour Court, Mysore vide Order No.LD 444 IDM 2006 dated 22-5-2006.

The conciliation regarding 30 points Charter of Demands of the union has ended in failure and action is being taken to refer the dispute for adjudication.

2) Zenith Textiles, Nanjangud : The conciliation regarding 22 points charter of Demands of the union has ended in failure and action is being taken to refer the dispute for adjudication.

3) Sai Laxmi Industries Pvt. Ltd., Tandya Industrial Area, Nanjangud:

The ownership of M/s. Sai Laxmi Industries Pvt. Ltd., has been transferred to the new employer as provided under Section

25-FF of the Industrial Disputes Act, 1947 and that the workmen of the erstwhile management have raised the dispute demanding continuation of their service under the new management and that conciliation proceedings to resolve this dispute are underway.

1320(614) ಶ್ರೀ ಸುರೇಶ ಎಸ್. ಮಾರಿಹಾಳ (ಕಿತ್ತೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಿತ್ತೂರು ಮತ ಕ್ಷೇತ್ರದಲ್ಲಿರುವ ಗಜಮನಾಳ ಮತ್ತು ಹೊಸಕೋಟೆ ಗ್ರಾಮಗಳಲ್ಲಿರುವ ಆಶ್ರಮ ಶಾಲೆಗಳಿಗೆ (ಎಸ್.ಟಿ) ವಸತಿ ಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬೆಳಗಾವಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಯವರು ವಸತಿ ಸೌಕರ್ಯಕ್ಕಾಗಿ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) ಗಜಮನಾಳ ಮತ್ತು ಹೊಸಕೋಟೆ ಗ್ರಾಮಗಳಲ್ಲಿರುವ ಆಶ್ರಮ ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಸರ್ಕಾರಿ ಆದೇಶ ಸಂಖ್ಯೆ: ಸಕಇ 78 ಪವಯೋ 2006, ದಿನಾಂಕ: 30.03.2006ರಲ್ಲಿ ಗಜಮನಾಳ ಗ್ರಾಮದಲ್ಲಿ ಆಶ್ರಮಶಾಲೆ ಕಟ್ಟಡ ನಿರ್ಮಾಣ ಮಾಡಲು ಕೇಂದ್ರ ಪುರಸ್ಕೃತ ಯೋಜನೆಗಳಡಿ 110.00 ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಈ ಕಾಮಗಾರಿಯನ್ನು ಅನುಷ್ಟಾನಗೊಳಿಸಲು ಟೆಂಡರ್ ಪ್ರಕ್ರಿಯೆ ನಡೆಸಲಾಗುತ್ತಿದೆ.

ಕೇಂದ್ರ ಪುರಸ್ಕೃತ ಯೋಜನೆಯಡಿ ಹೊಸಕೋಟೆ ಗ್ರಾಮದಲ್ಲಿ ಆಶ್ರಮಶಾಲೆ ನಿರ್ಮಾಣಕ್ಕೆ 2006–07ನೇ ಸಾಲಿನಲ್ಲಿ ಕ್ರಮ ಕೈಗೊಳ್ಳಲಾಗುವುದು.

ಆ) ಹೌದು.

ಇ) 2006–07ನೇ ಸಾಲಿನ ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ಅನುದಾನ ಒದಗಿಸಿರುವುದರಿಂದ ಕೇಂದ್ರ ಮತ್ತು ರಾಜ್ಯದ ಪಾಲಿನ ಅನುದಾನ ಪಡೆದು ಕಟ್ಟಡ ಕಾಮಗಾರಿಯನ್ನು ಪ್ರಸಕ್ತ ಸಾಲಿನಲ್ಲಿ ಕೈಗೊಳ್ಳಲಾಗುವುದು.

1321(1449) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿಂದುಳಿದ ಗಡಿ ಪ್ರದೇಶವಾದ ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ರಾಜ್ಯಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳೆಷ್ಟು;